**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ.14/2022**

**ಚಾಸಾ-5/ಪಿಡಬ್ಲೂ-2**

| | |
|---|---|
| **ಹೆಸರು** | ಪ್ರಭು |
| **ತಂದೆ ಹೆಸರು** | ಕರಬಸಪ್ಪ |
| **ವಯಸ್ಸು** | 46 ವರ್ಷಗಳು |
| **ಉದ್ಯೋಗ** | ಪೊಲೀಸ ಮುಖ್ಯ ಪೇದೆ |
| **ವಾಸ ಸ್ಥಳ** | ಕಲಬುರಗಿ |

**ದಿನಾಂಕ 12.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

2020 ರಿಂದ 2022 ರವರೆಗೆ DCIB ಘಟಕ ಕಲಬುರಗಿಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 05.05.2021 ರಂದು ಮಧ್ಯಾಹ್ನ 1.00 ಗಂಟೆಗೆ ಅಕ್ರಮ ಚಟುವಿಟಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ಕುರಿತು ಚಾಸಾ-1 ರವರೊಂದಿಗೆ ನಾನು, ಚಾಸಾ-4 ರವರು ಸೇರಿ ನಮ್ಮ ಸರಕಾರಿ ವಾಹನ ನಂ.ಕೆಎ-32/ಜಿ-696 ನೆಲೋಗಿ ಕಡೆಗೆ ಹೋಗುತ್ತಿದ್ದಾಗ ಚಾಸಾ-1 ನಮಗೆ ತಿಳಿಸಿದ್ದೇನೆಂದರೆ ಯಾತನೂರ ಸೀಮಾಂತರದ ಭೀಮಾ ನದಿಯಿಂದ ಅಕ್ರಮವಾಗಿ ಮರಳು ಸಂಗ್ರಹಣೆ ಮಾಡುತ್ತಿದ್ದಾರೆಂದು ಚಾಸಾ-1 ರವರು ಮಾಹಿತಿ ತಿಳಿಸಿ ದಾಳಿ ಮಾಡಬೇಕೆಂದು ತಿಳಿಸಿದರು. ನಾವು ಸರ್ವೆ ನಂ.322/8 ಗೆ ಭೇಟಿ ನೀಡಿ ಪರಿಶೀಲಿಸಲಾಗಿ ಅಲ್ಲಿ ಆರೋಪಿತರು ಅನಧಿಕೃತವಾಗಿ ಸರಕಾರದ ಪರವಾನಿಗೆಯಿಲ್ಲದೆ ಅಂದಾಜು 30-35 ಟಿಪ್ಪರನಷ್ಟು ಮರಳನ್ನು ಕಳ್ಳತನದಿಂದ ಸಂಗ್ರಹಿಸಿರುತ್ತಾರೆ. ದಿನಾಂಕ 05.05.2021 ರಂದು ಹಾಗೂ ವಾಹನದ ಚಾಲಕನ ಮೇಲೆ ಹಾಗೂ ಜಮೀನಿನ ಮಾಲಿಕರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಘಟನೆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.**

ನಾನಾಗಲಿ ಮತ್ತು ಚಾಸಾ-1 ರವರಾಗಲಿ ಗ್ರಾ.ಲೆ. ರನ್ನು ಕರೆಸಿ ಮರಳು ಸಂಗ್ರಹಿಸಿದ ಜಮೀನಿನ ಮಾಲಿಕರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಅಕ್ರಮವಾಗಿ ಸಂಗ್ರಹಿಸಿದ ಮರಳಿನ ಭಾವಚಿತ್ರಗಳನ್ನು ನಾವು ಪಡೆದಿಲ್ಲ. ಮರಳನ್ನು ಸಂಗ್ರಹಿಸಲು ಯಾವ ಟಿಪ್ಪರ ಹಾಗೂ ಜೆಸಿಬಿಯನ್ನು ಉಪಯೋಗಿಸಿದ ಬಗ್ಗೆ ನಾವು

ವಿಚಾರಿಸಿಲ್ಲ. ಟಿಪ್ಪರ ಹಾಗೂ ಜೆಸಿಬಿಯಿಂದ ಮರಳು ತುಂಬಿರುತ್ತಾರೆಂದು ಚಾಸಾ-1 ರವರು ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸರ್ವೆ ನಂ.322/8 ರಲ್ಲಿ ಯಾವುದೆ ಮರಳು ಸಂಗ್ರಹಿಸದಿದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಮರಳು ಸಂಗ್ರಹಿಸಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿರ್ದಿಷ್ಟವಾಗಿ ಸರ್ವೆ ನಂಬರ ಗೊತ್ತಿಲ್ಲದಿದ್ದರೂ ಸಹ ಹಾಗು ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ